# ‘ಇನ್‌ಸ್ಟಾ’ ನಿಯಂತ್ರಣ ಪೋಷಕರ ಕೈಯಲ್ಲಿ!




■ ಶಶಿಕುಮಾರ್ ಸಿ.

ಹದಿಹರೆಯದವರು ಇನ್‌ಸ್ಟಾಗ್ರಾಂ ಖಾತೆಗೆ ಹೆಚ್ಚು ಆಕರ್ಷಿತರು. ಅವರ ಅನುಕೂಲಕ್ಕೆಂದು ಇನ್‌ಸ್ಟಾಗ್ರಾಂ ಹೊಸ ಫೀಚರ್ ಪರಿಚಯಿಸಿದೆ. ಅದುವೇ ‘ಸ್ವಯಂ ನಿರ್ವಹಣೆ’. 12ರಿಂದ 18 ವರ್ಷದೊಳಗಿನವರು ಇನ್ನುಮುಂದೆ ಇನ್‌ಸ್ಟಾಗ್ರಾಂ ಖಾತೆಯನ್ನು ಸ್ವಯಂ ನಿರ್ವಹಿಸಬಹುದು. ಆದರೆ ಅವರ ಖಾತೆಯ ಕೆಲವೊಂದು ಐಚ್ಛಿಕ ನಿಯಂತ್ರಣಗಳ ಹಿಡಿತವನ್ನು ಇನ್‌ಸ್ಟಾಗ್ರಾಂ ಪೋಷಕರ ಕೈಗಿಟ್ಟಿದೆ!

ಫೋಟೊ ಹಂಚಿಕೆ ಹಾಗೂ ರೀಲ್ಸ್ ವಿಡಿಯೊಗೆ ಹೆಚ್ಚು ಪ್ರಸಿದ್ಧಿಯಾದ ವೇದಿಕೆ ಇನ್‌ಸ್ಟಾಗ್ರಾಂ, ತನ್ನ ಪ್ಲಾಟ್‌ಫಾರ್ಮ್‌ನಲ್ಲಿ ಹದಿಹರೆಯದ ಬಳಕೆದಾರರನ್ನು ಹಾನಿಕಾರಕ ವಿಷಯಗಳಿಂದ ದೂರವಿಡಲು ಅಗತ್ಯವಿರುವ ಕ್ರಮಗಳನ್ನು ಈ ಫೀಚರ್‌ನಲ್ಲಿ ಕೈಗೊಂಡಿದೆ.

ಯುವಜನರ ಮಾನಸಿಕ ಆರೋಗ್ಯದ ಮೇಲೆ ಇನ್‌ಸ್ಟಾಗ್ರಾಂ ಬಳಕೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂಬ ವರದಿ ಈಚೆಗೆ ಸದ್ದು ಮಾಡಿತ್ತು. ಅದರ ಬೆನ್ನಲ್ಲೇ ಪರಿಣಾಮಕಾರಿ ಬದಲಾವಣೆಗೆ ಇನ್‌ಸ್ಟಾಗ್ರಾಂ ಒಗ್ಗಿಕೊಂಡಿರುವುದು ಉತ್ತಮ ನಡೆ. ಈ ಬಗ್ಗೆ ಇನ್‌ಸ್ಟಾಗ್ರಾಂ ಹೇಳಿದ್ದು ಹೀಗೆ: ಇನ್‌ಸ್ಟಾಗ್ರಾಂನಲ್ಲಿ ಹದಿಹರೆಯದವರು ಒಂದೇ ವಿಷಯವನ್ನು ಪದೇ ಪದೇ ನೋಡುತ್ತಾರೆ. ಮಾನಸಿಕವಾಗಿ ಅದು ಅವರಿಗೆ ಪೂರಕವಲ್ಲದ ನಡೆ. ಅದರ ಬಗ್ಗೆ ನಾವು ನಿಗಾವಹಿಸಿದ್ದೇವೆ. ಹೀಗಾಗಿ, ಹದಿಹರೆಯದ ಮಕ್ಕಳು ಹಾನಿಕಾರಕ ವಿಷಯಗಳಿಂದ ದೂರವಿರುವಂತೆ ನಾವು ಕ್ರಮವಹಿಸಿದ್ದೇವೆ. ಆ್ಯಪ್ ಬಳಕೆಯಿಂದ ‘ವಿರಾಮ ಪಡೆಯುವ’ವಂತಹ ಕ್ರಮಗಳನ್ನೂ ಪರಿಚಯಿಸುತ್ತಿದ್ದೇವೆ.

‘ಫೇಸ್‌ಬುಕ್‌ನ ಭಾಗವಾಗಿರುವ ಇನ್‌ಸ್ಟಾಗ್ರಾಂ ಯುವ ಸಮೂಹದಲ್ಲಿ ಅತ್ಯಂತ ಜನಪ್ರಿಯ. ಅದು ಎಳೆಯ ಮನಸ್ಸುಗಳ ಮೇಲೆ ಆಘಾತಕಾರಿ ಪ್ರಭಾವ ಬೀರುವ ಅಂಶಗಳನ್ನು ಹೊಂದಿದೆ’ ಎಂದು ದಾಖಲೆಗಳ ಮೂಲಕ ಫೇಸ್‌ಬುಕ್‌ನ ಮಾಜಿ ಉದ್ಯೋಗಿ ಫ್ರಾನ್ಸಸ್ ಹಾಗೆನ್ ಬಹಿರಂಗಪಡಿಸಿದ್ದರು. ಅವರ ದಾಖಲೆಗಳ ಪ್ರಕಾರ, ‘ಇನ್‌ಸ್ಟಾಗ್ರಾಂ ಬಳಕೆಯಲ್ಲಿರುವ ಶೇ. 13.5ರಷ್ಟು ಹರೆಯದ ಹೆಣ್ಣು ಮಕ್ಕಳು ‘ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನಿಸುತ್ತದೆ’ ಎಂಬ ಅಭಿಪ್ರಾಯಪಟ್ಟಿದ್ದಾರೆ. ಶೇ. 17ರಷ್ಟು ಮಕ್ಕಳಲ್ಲಿ ಆಹಾರ ಸೇವನೆಯ ಸಮಸ್ಯೆ ಉಲ್ಬಣಗೊಂಡಿದೆ.

‘ಫೇಸ್‌ಬುಕ್ ಸಂಶೋಧನೆಯೇ ಹೇಳುವಂತೆ, ಹರೆಯದ ಹೆಣ್ಣುಮಕ್ಕಳು ಆಹಾರಕ್ಕೆ ಸಂಬಂಧಿಸಿದ ಪೋಸ್ಟ್‌ಗಳಿಂದಾಗಿ ಇನ್ನಷ್ಟು ಖಿನ್ನರಾಗುತ್ತಿದ್ದಾರೆ. ಆ್ಯಪ್ ಬಳಕೆಯ ತೀವ್ರತೆಯನ್ನು ಹೆಚ್ಚಿಸುವಂತೆ ಮಾಡಿದೆ. ಇದರಿಂದ ಅವರು ತಮ್ಮ ದೇಹವನ್ನು ಹೆಚ್ಚು ಹೆಚ್ಚು ದ್ವೇಷಿಸುವಂತಾಗಿದ್ದಾರೆ ಎಂದು ಹಾಗೆನ್ ಸಂದರ್ಶನವೊಂದರಲ್ಲಿ ಹೇಳಿದ್ದರು. ಫೇಸ್‌ಬುಕ್ ಪ್ರಚೋದನಾತ್ಮಕ ತಂತ್ರಾಂಶಗಳನ್ನು ಉಣಬಡಿಸಿ, ಹದಿಹರೆಯದವರ ಈ ಸಂಕಷ್ಟವನ್ನೇ ಬಂಡವಾಳ ಮಾಡಿಕೊಂಡು ಹಣ ಗಳಿಸುತ್ತಿದೆ. ಆದರೆ ಫೇಸ್‌ಬುಕ್ ಹೇಳುವುದೇ ಬೇರೆ’ ಎನ್ನುವುದು ಹಾಗೆನ್ ಆರೋಪ. ■

